ನಡೆಯುತ್ತಿದೆ, ನಡೆಯುವುದಕ್ಕೆ ಟೆಂಡರ್ ಪ್ರಕ್ರಿಯೆಯಾಗುತ್ತಿದೆ. ಮತ್ತೆ ಹೆಜಮಾಡಿಯಲ್ಲೂ ಕೂಡ ಇವತ್ತು dredging ಕೆಲಸವಾಗುತ್ತಿದೆ. ಹಾಗೆ ಎಲ್ಲಾ ಕಡೆ dredging ಮಾಡುತ್ತಿದ್ದೇವೆ. ಈ ಸಲ ಹೊಸ ಬಜೆಟ್‌ನಲ್ಲಿ ಹೆಚ್ಚು dredging ಮಾಡುತ್ತೇವೆ. ಇವತ್ತು ಮಾನ್ಯ ಸದಸ್ಯರಾದ ಖಾದರ್‌ರವರು ಹೇಳಿದಂತೆ, ಬೇರ ಕಡೆಗೆ maintenance ಗೆ ಕೊಡುವುದು, ಮತ್ತೆ dredger ತೆಗೆದುಕೊಳ್ಳುವುದು ಅಷ್ಟು ಸೂಕ್ತವಲ್ಲವೆನಿಸುತ್ತದೆ. ಏಕೆಂದರೆ, ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ dredging ಆಗದೇ ಪೋರ್ಟ್ ಉಳಿದಿದೆ ಎನ್ನುವುದು ನನ್ನ ಭಾವನೆ.

ಶ್ರೀ ಎನ್. ಯೋಗೀಶ್ ಭಟ್ (ಮಾನ್ಯ ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ತಪ್ಪು ತಿಳಿದುಕೊಳ್ಳಬಾರದು, ಖಾಸಗಿ ಸಂಸ್ಥೆಗಳಿಂದ dredger ತಂದು, ಅವರಿಗೆ ಕೋಟಿಗಟ್ಟಲೆ ಹಣವನ್ನು ಕೊಡುವ ಬದಲು, ನಮ್ಮಲ್ಲಿ 350 ಕಿ.ಮೀ. ಉದ್ದವಿರುವ ಕರಾವಳಿ ತೀರವಿದೆ, ನಮಗೆ ಪ್ರವಾಸೋದ್ಯಮಕ್ಕೂ ಅನುಕೂಲವಾಗುತ್ತದೆ, ಕರಾವಳಿಯ ಮೀನುಗಾರಿಕೆಗೂ ಅನುಕೂಲವಾಗುತ್ತದೆ. dredger ಅನ್ನು ಖರೀದಿ ಮಾಡುವ ವಿಚಾರದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಬೇಕೆಂದು ವಿನಂತಿ.

ಶ್ರೀ ಕೃಷ್ಣ ಪಾಲೇಮಾರ್: ಖಾಸಗಿ ಸಂಸ್ಥೆಗಳಿಗೆ dredging ಕೊಡುವುದನ್ನು ಕಡಿಮೆ ಮಾಡಿದ್ದೇವೆ. dredging Corporation of India ಕೇಂದ್ರ ಸರ್ಕಾರದ್ದಾಗಿರುವುದರಿಂದ ಅದಕ್ಕೆ ಪಾರದರ್ಶಕತೆ ಇರುತ್ತದೆ ಎನ್ನುವ ನಿಟ್ಟಿನಲ್ಲಿ, ಅವರಿಗೆ ಹೆಚ್ಚಾಗಿ ಕೊಟ್ಟು ಕೆಲಸವನ್ನು ಮಾಡಿಸಲಾಗುತ್ತಿದೆ. ಮುಂದಿನ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಕುಡಿಯುವ ನೀರಿನ ಯೋಜನೆ

55 (179) ಶ್ರೀ ಶಿವಶಂಕರ ರೆಡ್ಡಿ. ಎನ್. ಹೆಚ್. (ಗೌರಿಬಿದನೂರು) ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಗೌರಿಬಿದನೂರು ಪಟ್ಟಣಕ್ಕೆ ಕಿಂಡಿ ಅಣೆಕಟ್ಟು ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಯಾವಾಗ ಚಾಲನೆಗೊಳ್ಳುವುದು. ಈ ಯೋಜನೆಯಿಂದ ಪ್ರತಿ ದಿವಸ ಎಷ್ಟು ಲಕ್ಷ ಲೀಟರ್ ಕುಡಿಯುವ ನೀರು ಪೂರೈಸಲಾಗುವುದು;

(ಆ) ಈ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿ ಪಟ್ಟಣದ ವ್ಯಾಪ್ತಿಯಲ್ಲಿರುವ ಎರಡು ಸಣ್ಣ ಕೆರೆಗಳು ಅಂದರೆ, ಕೆರೆ ಕಲ್ಲಹಳ್ಳಿ, ಕೆರೆ ಉಡುಮಲೋಡು ಕೆರೆ, ಇವುಗಳಲ್ಲಿ ಹೆಚ್ಚು ಹೆಚ್ಚಾಗಿ ಜಲಸಂಗ್ರಹಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು (ವಿವರ ನೀಡುವುದು)?

ಶ್ರೀ ಎಸ್. ಸುರೇಶ್ ಕುಮಾರ್: ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು

(ಅ) ಗೌರಿಬಿದನೂರು ಪಟ್ಟಣ ಕೈ ಕಿಂಡಿ ಅಣೆಕಟ್ಟಿನಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಪರ್ಯಾಯ ಪಂಪನ್ನು ಅಳವಡಿಸಿ, ತಾತ್ಕಾಲಿಕವಾಗಿ ದಿನಾಂಕ 21.1.2012 ರಂದು ಚಾಲನೆಗೊಳಿಸಲಾಗಿದೆ. ಈ ಯೋಜನೆಯಿಂದ ಈಗ ಪ್ರತಿದಿನ 8.0 ಲಕ್ಷ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಯೋಜನೆಗೆ ನಿಗದಿಪಡಿಸಿರುವ ಪಂಪುಗಳನ್ನು ಮಾರ್ಚ್ 2012ರಲ್ಲಿ ಅಳವಡಿಸಿ, ಚಾಲನೆಗೊಳಿಸಲಾಗುವುದು.

(ಆ) ಕೆರೆ ಕಲ್ಲಹಳ್ಳಿ ಮತ್ತು ಉಡುಮಲೋಡು ಕೆರೆಗಳಿಂದ ಕುಡಿಯುವ ನೀರು ಸರಬರಾಜು ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇರುವುದಿಲ್ಲ.

ಶ್ರೀ ಎನ್.ಸಂಪಂಗಿ (ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್. ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಂತ್ರಿಗಳು ಹೇಳಿರುವ ಉತ್ತರದಲ್ಲಿ ಈಗ ಪ್ರತಿದಿನ 8.0 ಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಯೋಜನೆಗೆ ನಿಗದಿಪಡಿಸಿರುವ ಪಂಪುಗಳನ್ನು ಮಾರ್ಚ್ 2012 ರಲ್ಲಿ ಅಳವಡಿಸಿ, ಚಾಲನೆಗೊಳಿಸಲಾಗುವುದೆಂದು ಹೇಳಿದ್ದಾರೆ. ಈಗ ಮಾರ್ಚ್ ಒಳಗಡೆ ನೀವು ಕೊಟ್ಟಿರುವ ಸಮಯಕ್ಕೆ ಕರೆಕ್ಟ್ ಆಗಿ ಪ್ರಾರಂಭ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಪ್ರಾಯಶಃ 10 ದಿವಸಗಳ ಹಿಂದೆ ಬಾಗೇಪಲ್ಲಿ ಕ್ಷೇತ್ರಕ್ಕೆ ಹೋಗಿದ್ದೆ, ಅಲ್ಲಿ ಪರಗೋಡಿನ ಚಿತ್ರಾವತಿಯದು ಕೂಡ ಇದೆ. ಅಲ್ಲಿಗೂ ಕೂಡ ಪಂಪು ಬರಬೇಕು, ಅದಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಇಲ್ಲಿ ಗೌರಿಬಿದನೂರಿನಲ್ಲಿ

2012 ಮಾರ್ಚ್ 31ರ ಒಳಗಡೆ ನಾವು ಪಂಪ್ ಅನ್ನು ಅಳವಡಿಸಿ ಚಾಲನೆಗೊಳಿಸುತ್ತೇವೆಂದು ಹೇಳಿದ್ದೇವೆ, ಅದಕ್ಕೆ ಸರ್ಕಾರ ಬದ್ಧವಾಗಿದೆ ಆ ಕಾರ್ಯವನ್ನು ನಾವು ಮಾಡಿಕೊಡುತ್ತೇವೆ.

ಅಧ್ಯಕ್ಷರು: ಮಾರಿಹಾಳ್ ಸುರೇಶ್ ಶಿವರುದ್ರಪ್ಪನವರು ಇಲ್ಲ, ರಾಜಶೇಖರ ಬಸವರಾಜ ಪಾಟೀಲ್ ರವರೆ ತಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ, ಮುಂದಿನವಾರ ತೆಗೆದುಕೊಳ್ಳೋಣ, ಬುಧವಾರ ಉತ್ತರ ಕೊಡುತ್ತಾರೆ.

ದೊಡ್ಡಗಂಗವಾಡಿ ವಿ.ಎಸ್.ಎಸ್.ಎನ್‌ಗೆ ಹಣ ಬಿಡುಗಡೆ

59 (267) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿ ದೊಡ್ಡಗಂಗವಾಡಿ ವಿ.ಎಸ್.ಎಸ್.ಎನ್.ಗೆ ವೈದ್ಯನಾಥನ್ ವರದಿಯಿಂದ ಹಣ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಾದರೆ ಎಷ್ಟು ಹಣ ಬಂದಿದೆ; ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು)

(ಅ) 200–11 ರಿಂದ ಇಲ್ಲಿಯವರೆಗೆ ಆಡಿಟ್ ಮಾಡಲಾಗಿದೆಯೇ?

(ಇ) 2004ರ ನಂತರ ರಾಜ್ಯ ಸರ್ಕಾರದ ಬಡ್ಡಿ ಮನ್ನಾ ಯೋಜನೆಯ ಸೌಲಭ್ಯವನ್ನು ಪಡೆದ ಫಲಾನುಭವಿಗಳು ಯಾರ್ಯಾರು ಮತ್ತು 2001 ರಿಂದ ಇಲ್ಲಿಯವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಂದಿರುವ ಸಹಾಯವೆಷ್ಟು (ವಿವರಗಳನ್ನು ನೀಡುವುದು)

(ಈ) 2006 ರಿಂದ ಇಲ್ಲಿಯವರೆಗೆ ಕೃಷಿ ಸಾಲದ ಕೃಷಿ ಸಾಲದ ಸುಸ್ತಿದಾರರ ವರ್ಷವಾರು ವಿವರ ನೀಡುವುದು;

(ಉ) 2011ರ ಡಿಸೆಂಬರ್ ಅಂತ್ಯಕ್ಕೆ ಉಳಿದಿರುವ ಬಾಕಿ ಹಣವೆಷ್ಟು?

ಶ್ರೀ ಲಕ್ಷ್ಮಣ ಸವದಿ (ಕೃಷಿ, ಮಾರುಕಟ್ಟೆ ಸಚಿವರು):

(ಅ) ದೊಡ್ಡಗಂಗವಾಡಿ ವಿಎಸ್.ಎಸ್.ಎನ್.ಗೆ ಪ್ರೊ. ವೈದ್ಯನಾಥ್ ಸಮಿತಿ ಶಿಫಾರಸ್ಸಿನ ಅನ್ವಯ ಅಲ್ಪಾವಧಿ ಸಾಲದ ವ್ಯವಸ್ಥೆಯ ಪುನರ್ಶ್ಚೇತನಕ್ಕಾಗಿ ಕೇಂದ್ರ ಸರ್ಕಾರದಿಂದ